

### ಮೂರ್ಲೋಕಕ್ಕೂ ದಕ್ಕದ ಚಟ್ನಿ!

ನಮ್ಮ ಸಹಯಾತ್ರಿ ಕುದುರೆ ಮಾಲೀಕ ಪರಿಮಳ ಸೂಸುವ ದಪ್ಪ ಎಲೆಯ ನೆಲಸಸ್ಯದ ದಂಟೊಂದನ್ನು ಕೊಟ್ಟು 'ಚಟ್ನಿ ಮಾಡು' ಎಂದಿದ್ದ. ಅದನ್ನು ಅಲ್ಮೋಡಾದಲ್ಲಿ ಕಂಡವರೊಬ್ಬರು, 'ಇದನ್ನು ಪೊಲೀಸರು ಕಂಡರೆ ನೀವು ಜೈಲುಪಾಲಾಗುವುದು ಪಕ್ಕಾ' ಎಂದು ಹೇಳಿದ್ದರು. ನಾನೂ ಹೆದರಿ ಅದನ್ನು ಕಸದಬುಟ್ಟಿಗೆ ಸೇರಿಸಿದ್ದೆ. ಈಗ ಎಲ್ಲವೂ ಮತ್ತೆ ನೆನಪಾಗಿ, ಆ ಪುಟ್ಟ ಗಿಡ, 'ಮೂರ್ಲೋಕಕ್ಕೂ ದಕ್ಕದ ಚಟ್ನಿಯನ್ನು ತಿನ್ನುವ ಅವಕಾಶ ಬಿಟ್ಟೆಯಾ ಮೂರ್ಖ' ಎಂದು ಹಂಗಿಸಿದಂತಾಗುತ್ತಿದೆ!

ಲೇಖಕರ ನೆನಪಿಯಲ್ಲಿ ಮೂಡಿದ ಸಸ್ಯ



ಬಿದಿರಗೋಲು ಸುತ್ತುತ್ತಾ ಕಂಬಳಿ ನೂಲು ತೆಗೆಯುವುದರಲ್ಲಿ ಮಗ್ನ ನಾಮಿಕ್ ನಿವಾಸಿ

ಗುಂಪು ಕಟ್ಟಿಗೆ ರಾಶಿಯೊಡನೆಯೂ ಗಂಡಸರು ನಶಾಸೊಪ್ಪುಗಳೊಂದಿಗೂ ಎದುರಾಗುತ್ತಿದ್ದರು! ವಿಶೇಷವೆನ್ನಿಸುವ ಅಲ್ಲಿನ ಬಹಳಷ್ಟು ಮನೆಗಳು ಬರೀ ಕಲ್ಲಿನ ಮೇಲೆ ಕಲ್ಲು ಕಟ್ಟಿಯೇ ನಿರ್ಮಾಣವಾದ ರಚನೆಗಳು. ನೆಲಮಾಳಿಗೆಯಲ್ಲಿ ಕೊಟ್ಟಿಗೆಯೂ ಅಟ್ಟಣಿಗೆಯಲ್ಲಿ ಮನುಷ್ಯ ಮಾತ್ರರೂ ಇರುವಂತೆ ರೂಪಿಸಿಕೊಂಡ ನೆಲೆಗಳು. ಸುಂದರವಾದ ಕಟ್ಟಿಗೆಯ ಬಾಗಿಲು, ಚೌಕಟ್ಟು, ಬಣ್ಣಗಳಿಂದ ಮನೆಯನ್ನು ಶೃಂಗರಿಸಿಕೊಂಡಿದ್ದಾರೆ. ಅಲ್ಲೇ ತುಸು ಎತ್ತರದಲ್ಲಿದ್ದ ಬಯಲು ನಮಗವತ್ತಿಗೆ ಆಲಯ. ಬೆಟ್ಟದ ಮೇಲೆ ಅಲ್ಲಲ್ಲಿ ಕೆರೆ ಸರೋವರಗಳಿವೆ. ನೀರ ಹರಿವೂ ತಕ್ಕಮಟ್ಟಿಗೆ ಚೆನ್ನಾಗಿದೆ. ಚಳಿಗಾಲದಲ್ಲಿ ಆ ಇಡೀ ಜಾಗದ ಮೇಲೆ ಫೀಟುಗಟ್ಟಲೇ ಎತ್ತರಕ್ಕೆ ಹಿಮಮುಚ್ಚಿ, ಗ್ರಾಮಸ್ಥರು ನಾಲ್ಕೈದು ತಿಂಗಳು ಮನೆಯಿಂದ ಆಚೆ ಬರದೆ ಚಾತುರ್ಮಾಸ ಕೂರಬೇಕಾಗುತ್ತದಂತೆ.

ಮರುದಿನ ಗಾಳಿ ತುಸು ತೆಳುವಾಗುವ 10000 ಅಡಿಯಾಚೆ ಹೊರಟೆವು. ಅಪರಿಮಿತ ಕಲಾಕೃತಿಗಳ ಸಂಗ್ರಹಶಾಲೆಯಂತೆ ತೋರುವ ಚಿತ್ರವಿಚಿತ್ರ ಬೇರು ಟೊಂಗೆಗಳನ್ನು ಹೊತ್ತ ವೃಕ್ಷ ಸಮೂಹವನ್ನು ದಾಟಿ ಮುಂದೆ ನಡೆಯಲು ಮನಸು ಬಾರದು. 'ಬ್ರಹ್ಮ ಕಮಲ' ಕಾಣುವಾಸೆ ಕಾಲೆತ್ತಲು ಹುಕಿ ಕೊಡುತ್ತಿತ್ತು. ಅತಿರಮ್ಯವಾದ ಹೂವೇನೂ ಅಲ್ಲದಿದ್ದರೂ ಬ್ರಹ್ಮ ಕಮಲ (**Saussurea obvallata**) ಕುತೂಹಲ ಕೆರಳಿಸಲು ಕಾರಣ ಹಲವು. ಅಮೂಲ್ಯವೂ ಔಷಧೀಯ ಗುಣಗಳಿಂದ ಸಮೃದ್ಧವೂ ಹಾಗಾಗಿಯೇ ಅಪರೂಪವೂ ಆದ ಈ ಗಿಡಗಳು ಮಳೆಗಾಲದ ಮೊದಲು 4000 ಮೀಟರ್ ಎತ್ತರದ ಆಸುಪಾಸಿನಲ್ಲಿ ಮಾತ್ರ ಬೆಳೆದು ಹೂ ತಳೆಯುತ್ತವಂತೆ. ಅಲ್ಲೊಂದು ಇಲ್ಲೊಂದು ಹೂವರಳಿದ ಗಿಡವನ್ನು ಕಂಡು ಖುಷಿಪಟ್ಟೆವು.

ಸರಾಸರಿ ಗಂಟೆಗೊಂದಾವರ್ತಿಯಂತೆ ಛತ್ರಿ–ಜರ್ಕಿನ್ ದಾಟಿ ಮೈಮುಟ್ಟುವಂತೆ ಮಳೆ. ತಾಲ್ಬೊಕ್/ಚುಪ್ವಾ (ಹೆಸರು ಮರೆತಿದೆ) ಎಂಬ ಯಾರೂ ಇರದ ಕುರಿ ಹಿಕ್ಕೆ ತುಂಬಿದ ಶಿಥಿಲವಾದೊಂದು ಕಟ್ಟಡ ಅವತ್ತಿಗೆ ನಮ್ಮ ನೆಲೆ. ಆ ಕಟ್ಟಡದ ಮುಂದಿನ ಪುಟ್ಟ ಬೆಟ್ಟ ಹತ್ತಿ ನಿಂತರೆ ಸಾಲು ಮೋಡಗಳು ನಮ್ಮನ್ನು ನೇವರಿಸಿ ಸಾಗುತ್ತವೆ. ದೂರದಲ್ಲಿ ಮೇಯುವ ಕುರಿಗಳು ಕಣಿವೆಯ ತುಂಬೆಲ್ಲಾ ಹರಡಿ ಅಲ್ಮೋಡಾದಲ್ಲಿ ಸಿಗುವ ಪ್ರಸಿದ್ಧ ಬಾಲ್ ಮಿಠಾಯಿಯಂತೆ ತೋರುತ್ತದೆ. ಹಾಲಿನ ಪೇಡೆಯ ಮೇಲೆಲ್ಲಾ ಮೆತ್ತಿರುವ ಸಕ್ಕರೆಯ ಹರಳುಗಳಂತೆ, ಹಸಿರು ಬೆಟ್ಟಕ್ಕೆ ಮೆತ್ತಿದಂತೆ ಹುಲ್ಲು ಮೇಯುವ ಬಿಳಿ ಕುರಿಗಳು!

ಸುಧುಮ್ ಖಾನ್ ಎಂಬ ಮತ್ತೂ ಎತ್ತರದ ಜಾಗಕ್ಕೆ ಮುಂದಿನ ಲಗ್ಗೆ. ಅದು ಇಡೀ ಚಿತ್ರದ ಥಾಳಾದ ವರ್ಣಭಾಗ. ಯಾರೋ ತಂದು ಸುರಿದಂತೆ ರಾಶಿ ಸೈಜುಗಲ್ಲುಗಳು, ದಾಟಿದರೆ ಒಂದೆಡೆಗೆ ತಳ ಕಾಣದ ಪ್ರಪಾತ, ಪಕ್ಕಕ್ಕೆ ಇಳಿಜಾರು. ಅಷ್ಟೆತ್ತರ ಏರಿಯೂ ಊಟಿಯಷ್ಟೂ ಚಳಿಯಿಲ್ಲದೆ, ಕೊಂಡೊಯ್ದಿದ್ದ ಬೆಚ್ಚನೆಯ ಉಡುಪುಗಳು ಬ್ಯಾಗುಗಳಲ್ಲೇ ಪವಡಿಸಿದವು.

ಅವತ್ತು ಅಲ್ಲೇ ಟೆಂಟ್ ಹೊಕ್ಕು ಮರುದಿನ 5 ಗಂಟೆಯ ಮುಂಜಾವಿಗೆದ್ದರೆ ಮೇಘಮಾಲೆ ಬಿಗಿದು ಕುಂತಿತ್ತು. ಅದು ಸರಿದು ಸೂರ್ಯ ದರುಶನವಾಗುವುದೋ ಎಂಬ ಕಾತುರದಲ್ಲಿ ಪಕ್ಕದ ಬರೆಯೇರಿದರಾಗಲೇ ಬೆಳಕಿನ ಮ್ಯಾಜಿಕ್ ಶುರುವಾಗಿತ್ತು. ಎಡಕ್ಕೆ ನಂದಕೋಟ್, ನಂದಾದೇವಿ ಬಲಕ್ಕೆ ಮೋಹಕ ಪಂಚಚುಲಿ ಪರ್ವತಪಂಕ್ತಿ. ಎತ್ತ ತಿರುಗಿದರತ್ತ ನಿಜರೂಪು ಹೊತ್ತ ಶೃಂಗಸಾಲು. ಹಿಮಗಾಲ ತಪ್ಪಿಸಿ ಬಂದು ಎಡವಟ್ಟಾಯಿತೋ ಎಂಬ ಅತಿ ಸಣ್ಣ ಬೇಸರವು ಇಲ್ಲಿ ನಿಂತಾಗ ಸಂಪೂರ್ಣ ನಿರ್ವಾಣ ಹೊಂದಿತು. ಅವಸರವಿಲ್ಲದೇ ದಿಗಂತವ ರಮಿಸುವ ಹೊಂಬಣ್ಣ. ಯಾವುದು ಏರು, ಯಾವುದು ಇಳುಕಲು? ಎಲ್ಲಿಯ ಮುಗಿಲು, ಮತ್ತೆಲ್ಲಿಯ ಗಿರಿಸಾಲು? ಯಾರು ಎಲ್ಲಿಯವರು? ಎಲ್ಲಿಗೆ ಸಲ್ಲುವರು? ಸಕಲ ಚರಾಚರಗಳು ಒಂದಾಗಿ, ಮಲ್ಹಾರವಾಗಿ ತುಸು ತುಸುವೇ ಎದೆಗಿಳಿದು ಜೀವಕ್ಕೆ ಸಾಕೆನ್ನುವಷ್ಟು ನೆನಪ ತುಂಬಿದವು.

ಎರಡೋ ಮೂರೋ ಗಂಟೆ ಕಳೆದಿರಬೇಕು. ಮತ್ತೆ ಎಲ್ಲ ನೆನಪಾಗಿ ನಂದಕುಂಡ ಮಾರ್ಗವಾಗಿ ನಡೆದದ್ದೂ ನಡೆದದ್ದೇ. ಪುಟ್ಟದೊಂದು ಕೊಳವನ್ನೇ ನಂದಕುಂಡವೆಂದು ಭಾವಿಸಿಕೊಂಡು (ಅದಲ್ಲವೆಂದು ತಿಳಿದೂ!), ಪರತ್ ಹೊರಟರೆ, ನೋಡಿ ಬಂದ ಚಿತ್ರಗಳೆಲ್ಲವೂ ಅದಲು ಬದಲಾಗಿದ್ದವು. ಹೊಸ ಬೆಳಕು ಹರಿದಿತ್ತು.

ಪ್ರತಿಕ್ರಿಯಿಸಿ: **feedback@sudha.co.in**

